**PW-1**

ದಿನಾಂಕ **01.02.2021** ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಶ್ರೀ ಐ ಆರ್ ಬಿ ವಕೀಲರಿಂದ ಃ

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ ಮತ್ತು ಅದರಲ್ಲಿರುವ ಸಂಗತಿಗಳು ಸರಿ ಇರುತ್ತವೆ ಹಾಗೂ ಅವುಗಳನ್ನು ನಾನೇ ಹೇಳಿ ಖುದ್ದಾಗಿ ಬರೆಯಿಸಿರುತ್ತೇನೆ.

ಮರ್ಣೆ ಗ್ರಾಮದ ಸ.ನಂ**109/6** ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ಪ್ರತಿವಾದಿ ಪರ ವಕೀಲರ ತಕರಾರಿನ ಮೇರೆಗೆ ನಿಪಿ-**1** ಎಂದು, ಮೂಲದಾವೆ ಸಂಖ್ಯೆ **130/12** ರ ಕಾಂಪೋಸಿಟ್ ಫೈನಲ್ ಡಿಕ್ರಿಯ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ಪ್ರತಿವಾದಿ ಪರ ವಕೀಲರ ತಕರಾರಿನ ಮೇರೆಗೆ ನಿಪಿ-**2** ಎಂದು, ದಿಃ**12.06.2019** ರಂದು ಠಾಣಾಧಿಕಾರಿ, ಹೆಬ್ರಿ ಪೊಲೀಸ್ ಠಾಣೆಗೆ ನೀಡಿದ ಪಿರ್ಯಾದಿನ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ಪ್ರತಿವಾದಿ ಪರ ವಕೀಲರ ತಕರಾರಿನ ಮೇರೆಗೆ ನಿಪಿ-**3** ಎಂದು, ನಿಪಿ-**3** ಸ್ವೀಕರಿಸಿದ ಕುರಿತು ನೀಡಿದ ತ್ರಿಪ್ರತಿ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ಪ್ರತಿವಾದಿ ಪರ ವಕೀಲರ ತಕರಾರಿನ ಮೇರೆಗೆ ನಿಪಿ-**4** ಎಂದು, ದಿಃ**12.06.2019** ರಂದು ಠಾಣಾಧಿಕಾರಿ, ಅಜೆಕಾರು ಪೊಲೀಸ್ ಠಾಣೆಯವರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ಪ್ರತಿವಾದಿ ಪರ ವಕೀಲರ ತಕರಾರಿನ ಮೇರೆಗೆ ನಿಪಿ-**5** ಎಂದು, ದಿಃ**01.08.2019** ರಂದು ತಹಸಿಲ್ದಾರ್, ಕಾರ್ಕಳ ರವರು ಪೊಲೀಸ್ ಉಪನೀರಿಕ್ಷಕರು ಅಜೆಕಾರು ಪೋಲೀಸ್ ಠಾಣೆಯವರಿಗೆ ನೀಡಿದ ವರದಿಯನ್ನು ಹಾಜರುಪಡಿಸಿದ್ದು ಅದನ್ನು ಪ್ರತಿವಾದಿ ಪರ ವಕೀಲರ ತಕರಾರಿನ ಮೇರೆಗೆ ನಿಪಿ-**6** ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ಡಿಕ್ರಿಗೊಳಿಸಬೇಕೆಂದು ಪ್ರಾರ್ಥನೆ.

**ಪಾಟೀ ಸವಾಲು** ಃ ಸಮಯ ಕೋರಿದ್ದು ಮುಂದೂಡಲಾಯಿತು.

ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಿಸಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಎ.ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ

ಕಾರ್ಕಳ